Tumbe International e-Magazine
ISSN : 2581-7728
A Multilanguage Magazine
Issue-2
Volume-3
July-Dec: 2020

# ಪರದೆ ಸರಿದರೆ..

**ಶ್ರೀವಿದ್ಯಾ ಎ**
(Shreevidya A)
Student- 1st M.Sc. Physics
Mangalore University, Mangalagangotri, Konaje, Mangalore.
Valachil padav, Farangipete, Mangalore.
ashreevidya97@gmail.com Mobile: 9448028127

ಪರದೆ ಸರಿದಿದೆ,
ಹಿರಿಯರೆಲ್ಲ ಕಥೆಗಾರರೇ
ಸ್ಪಷ್ಟೀಕರಿಸದಿರು ಇಷ್ಟಬಂದಷ್ಟು,
ನೀ ಬರಿಯ ನಟಿಯಷ್ಟೇ..
ನಿರ್ದೇಶಕನೋ ಕಾವಲುಗಾರನೋ,
ಅವನ ಆಕ್ಷನ್- ಕಟ್ ಗಳದೇ ವೇದಿಕೆ,
ಭಾವಗಳನೂ ಕತ್ತರಿಸಿಬಿಡು..!!
ಎಲ್ಲ ಗೋಚರವಲ್ಲ ಈ ಚಿತ್ರದಲಿ
ನಿನ್ನ ಕಣ್ಣುಗಳಿಗೆ ಗ್ಲಿಸರಿನ್ ಬೇಡ,
ಎದೆಯಿಂದ ನಗು ಬಂದು ತುಟಿಗಪ್ಪಳಿಸಿದರೆ,
ಕೈ ಬಿಸಿಯಾಗಿದೆ, ಮನೆಮದ್ದಿಲ್ಲ
ರೆಡಿಮೇಡ್ ಆಯಿನ್ಟ್ ಮೆಂಟ್ ತೆರೆಯಲಿ..!?
ಕಾವಲುಸೈನಿಕನದು ಕಟ್ಟಪ್ಪಣೆ !
ಹೊರಗಿಳಿಯದಿರು ಎಲ್ಲ ಒಳಗಿದೆ..!
ತಿಳಿದಿದೆ ಅವ ಕುಂಭಕರ್ಣನೇ
ಆದಿಮಾಯೆ ಹೆದರಿದಳು ಹೆದರದೇ.!
ನಿರ್ದೇಶಿಸಿದನಷ್ಟೇ..
ದುಃಖ ದುಮ್ಮಾನಗಳನರಿಯಲಿಲ್ಲ,
ಅಡಿಗೆಮನೆಯ ಗೋಡೆಗಳಿಗೇ ಕಿವಿ ಬರಬೇಕಿತ್ತು
ಅಲ್ಲೇ ಚಿತ್ರದ ಕೊನೆಯ ದೃಶ್ಯವೂ..!!